**IX. ಟಿಪ್ಪಣಿ ಓದಿ, ಪ್ರಶ್ನೆಗಳನ್ನು ಉತ್ತರಿಸಿರಿ: 2x6=12**

1. ರಮೇಶ ಹನ್ನೊಂದು ವರ್ಷದ ಹುಡುಗ. ರಸ್ತೆ ದಾಟುವಾಗ ಅವನು ತುಂಬಾ ಜಾಗರೂಕತೆಯಿಂದ ಇರುವನು. ಅವನ ತಾಯಿ ಅವನಿಗೆ ಯಾವಾಗಲೂ ಈ ಬಗ್ಗೆ ಎಚ್ಚರಿಕೆ ನೀಡುತ್ತಿದ್ದಳು. ಒಂದು ದಿನ ಅವನು ಒಬ್ಬ ಪ್ರಾಯದ ಮಹಿಳೆ ಹಣ್ಣುಗಳನ್ನು ಹೋಗುವುದನ್ನು ಕಂಡನು. ಆ ಮಹಿಳೆಯ ಮುಖದಲ್ಲಿ ಬೇಸರ ಎದ್ದು ಕಾಣುತ್ತಿತ್ತು. ತಾನು ಬಲಿಷ್ಟನಲ್ಲ ಎಂದು ತಿಳಿದಿದ್ದರೂ, ರಮೇಶ ಅವಳ ಸಹಾಯಕ್ಕೆ ಹೋದನು. ಹಣ್ಣಿನ ಬುಟ್ಟಿಗೆ ಕೈಕೊಟ್ಟು ಆ ಮಹಿಳೆಗೆ ರಸ್ತೆ ದಾಟಲು ರಮೇಶ ಸಹಕರಿಸಿದನು. ಇದರಿಂದ ಆ ಮಹಿಳೆಗೆ ತುಂಬಾ ಸಂತೋಷವಾಯಿತು.

   **a) i) ರಮೇಶನ ಈ ಸೇವೆ ನಿನಗೆ ಮೆಚ್ಚಿತೆ?**

   **ii)** ಏಕೆ?

   **b) i) ನಾವು ಇತರರಿಗೆ ಸಹಾಯ ಹಸ್ತ ನೀಡಬೇಕೇ?**

   **ii)** ಏಕೆ?

   **c) ದೇವರನ್ನು ತೃಪ್ತಿ ಪಡಿಸಲು ನೀನು ನಿನ್ನ ಕೈಗಳನ್ನು ಹೇಗೆ ಉಪಯೋಗಿಸುವೆ? ವಿವರಿಸು.**

2. ಸ್ಮಿತಾ ಮತ್ತು ವಿಮಲ ಒಳ್ಳೆಯ ಸಹಪಾಠಿಗಳು. ಅವರಿಬ್ಬರೂ ಅಕ್ಕಪಕ್ಕದ ಮನೆಯವರು. ಸ್ಮಿತಾ ಮತ್ತು ವಿಮಲ ಆಗಾಗ್ಗೆ ಪರಸ್ಪರ ಬೇಟಿಯಾಗುತ್ತಿದ್ದರು. ಒಮ್ಮೆ ಸ್ಮಿತಾ ಬಿದ್ದು ಗಾಯಗೊಂಡಾಗ ಅವಳನ್ನು ಆಸ್ಪತ್ರೆಗೆ ಸೇರಿಸಿದ್ದರು. ಅನೇಕ ವಿಧದ ಪರೀಕ್ಷೆಗೆ ಒಳಪಡಿಸಿದ ನಂತರ ವೈದ್ಯರು ಅವಳು ಕ್ಯಾನ್ಸರ್ ರೋಗಿಯೆಂದು ಗುರುತಿಸಿದರು. ಸ್ಮಿತಾಳನ್ನು ಮನೆಗೆ ಕರೆದುಕೊಂಡು ಬಂದರು. ಸ್ಮಿತಾಳು ಕ್ಯಾನ್ಸರ್ ರೋಗಿಯೆಂದು ತಿಳಿದಾಕ್ಷಣದಿಂದ ವಿಮಲ ಅವಳ ಭೇಟಿಯನ್ನು ನಿಲ್ಲಿಸಿದಳು. ಆದರೆ ಸ್ಮಿತಾಳು ವಿಮಲಳ ಭೇಟಿಗಾಗಿ ತುಂಬಾ ಹಾತೊರೆಯುತ್ತಿದ್ದಳು.

   **a) i) ವಿಮಲಳ ವರ್ತನೆ ನಿನಗೆ ಮೆಚ್ಚಿತೆ?**

   **ii)** ಏಕೆ?

   **b) ಒಂದು ವೇಳೆ ಸ್ಮಿತಾಳು ನಿನ್ನ ಪಕ್ಕದ ಮನೆಯವಳಾಗಿದ್ದರೆ ನೀನೇನು ಮಾಡುತ್ತಿದ್ದೆ? ಎರಡು ಸಲಹೆ ಕೊಡು.**

   **c) ಇತರರ ಕಷ್ಟದಲ್ಲಿ ನಾವು ಅನುಕಂಪ ತೋರಿಸಬೇಕೆ? ಏಕೆ? ವಿವರಿಸು.**



# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 05–01–2019** **ಸಮಯ : $2^1/_2$ ಘಂಟೆ**

**ತರಗತಿ : VII** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರ ಆರಿಸಿ ಬರೆಯಿರಿ: 10x1=10**

1. ಇತರರನ್ನು ಅರಿತು ಕೊಂಡಿರುವವರು ________ ತಮ್ಮನ್ನೆ ಅರಿತು ಕೊಂಡಿರುವವರು ಜ್ಞಾನಿಗಳು.

   (ಬುದ್ದಿವಂತರು; ವಿದ್ಯಾವಂತರು; ಗುಣವಂತರು)

2. ________ ಎಲ್ಲ ಶಿಕ್ಷಣಕ್ಕಿಂತ ಪ್ರಮುಖವಾದುದು.

   (ಕಾನೂನು ಶಿಕ್ಷಣ; ಆರೋಗ್ಯ ಶಿಕ್ಷಣ; ಮೌಲ್ಯ ಶಿಕ್ಷಣ)

3. ________ ಗಳು ಮಾನವ ಕುಟುಂಬದಲ್ಲಿ ಬಂಧಿಸುತ್ತವೆ.

   (ಭಾವನೆ; ಕೊಕ್ಕರೆ; ಮೀನು)

4. ಸಂಗೀತ ತನ್ನ ಕಲಿಕೆಯಲ್ಲಿ ತುಂಬಾ ________ಳು.

   (ನಿಷ್ಠಾವಂತ; ಬುದ್ದಿವಂತ; ಗುಣವಂತ)

5. ಸ್ವಾತಂತ್ರ್ಯ ಆಯ್ಕೆ ಮಾಡುವ ನಮ್ಮ __________ ಕ್ಕೆ ಅನ್ವಯಿಸುತ್ತದೆ.

   (ಆರೋಗ್ಯ; ಸಂತೋಷ; ಸಾಮರ್ಥ್ಯ)

6. ________ ದ ಕೊಡಲಿಯನ್ನು ಕಂಡು ಮರ ಕಡಿಯುವವನು ಸಂತೋಷದಿಂದ ಕೂಗಿದನು.

   (ಚಿನ್ನ; ಬೆಳ್ಳಿ; ಕಬ್ಬಿಣ)

7. ಮೊದಲನೇ ಸೇವಕನಿಗೆ ಯಜಮಾನ ________ ಸಾವಿರ ಚಿನ್ನದ ನಾಣ್ಯಗಳನ್ನು ಕೊಟ್ಟನು.

   (ಒಂದು; ಎರಡು; ಐದು)

8. ______ ಅಮೇರಿಕೆಯ ಅಧ್ಯಕ್ಷರಾದರು.

   (ಅಬ್ರಹಾಂ ಲಿಂಕನ್; ಬಿಥೋವನ್; ರಿಚರ್ಡ್)

9. ಮರಗಳು ಜಾಸ್ತಿಯಿದ್ದರೆ ಮಾನವ ಜೀವಿಗಳು ________ರಾಗಿ ಬೆಳೆಯುತ್ತಾರೆ.
(ಬುದ್ಧಿವಂತ; ನೀತಿವಂತ; ಆರೋಗ್ಯವಂತ)

10. __________ ಕೊಟ್ಟಷ್ಟು ಅದು ನಿನ್ನಲ್ಲಿ ಅಧಿಕವಾಗುತ್ತದೆ.
(ಸಂತೋಷ; ದುಃಖ; ಬಡತನ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ : 5x1=5**

1. ಸತ್ಯನಿಗೆ ___________ ವಿಷಯದಲ್ಲಿ ಮಾತ್ರ ಯಾವ ಆಸಕ್ತಿಯು ಇರಲಿಲ್ಲ.
2. ಯಶಸ್ಸಿನ ಮನುಷ್ಯನಾಗ ಬೇಡ, ಪ್ರತಿಯಾಗಿ _________ ಮಾನವನಾಗು.
3. ಆಳ ಭಾವನೆಗಳುಳ್ಳ ವ್ಯಕ್ತಿ ಮಾತ್ರ ಇತರರ _______ ಗಳನ್ನು ಅರ್ಥ ಮಾಡಿಕೊಳ್ಳಬಲ್ಲ.
4. ಕಾಯಾ, ವಾಚಾ, __________ ಪ್ರವರ್ತಿಸುವವರು ಒಳ್ಳೆಯ ಜನರು.
5. __________ ನಾಯಿ ಬಡಕಲಾಗಿತ್ತು.

**III. ಹೊಂದಿಸಿ ಬರೆಯಿರಿ: 5x1=5**

| | | |
|---|---|---|
| 1. ಮೌಲ್ಯ ಶಿಕ್ಷಣ | – | ಅದ್ಭುತ ವಸ್ತು |
| 2. ಮೆದುಳಿನ ಮೌಲ್ಯ | – | ಪ್ರತಿಭಾವಂತೆ |
| 3. ಹೃದಯದ ಮೌಲ್ಯ | – | ಸತ್ಯ |
| 4. ಲಿಲ್ಲಿ | – | ಪ್ರಮುಖವಾದುದು |
| 5. ಸಂತೋಷ | – | ಕ್ಷಮೆ |

**IV. ಈ ಕೆಳಗಿನ ವಾಕ್ಯಗಳು ಸರಿ ಅಥವಾ ತಪ್ಪು ಎಂದು ಬರೆಯಿರಿ : 5x1=5**

1. ಅಳುತ್ತಿರುವ ಮಗುವಿನ ಕೂಗನ್ನು ಕೇಳಿದಾಕ್ಷಣ ಹೆಂಗಸರು ಓಡಿ ಬಂದರು.
2. ಸಾಕು ನಾಯಿ ಯಜಮಾನನಿಗೆ ವಿಧೇಯವಾಗಿರಲಿಲ್ಲ.
3. ಪ್ರಾಮಾಣಿಕತೆ ನಮಗೆ ವಿಳಂಬವಾದರೂ ತಕ್ಕ ಸಂಭಾವನೆಯನ್ನು ನೀಡುತ್ತದೆ.
4. ಒಳ್ಳೆಯ ಕೆಲಸ ಮಾಡಿದಿರಿ! ನನ್ನ ಒಳ್ಳೆಯ ಮತ್ತು ವಿಧೇಯ ಸೇವಕರೇ.
5. ಸ್ವಚ್ಚತೆ ಮಾನವನ ಬಡತನವನ್ನು ಸೂಚಿಸುತ್ತದೆ.

**V. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ: 5x1=5**

1. ಮೌಲ್ಯ ಶಿಕ್ಷಣದ ಪ್ರಾಮುಖ್ಯತೆಯನ್ನು ಸತ್ಯ ಯಾವಾಗ ತಿಳಿದುಕೊಂಡನು?
2. ಮೌಲ್ಯದ ಎರಡು ವಿಭಾಗಗಳಾವವು?
3. ಹೆಂಗಸರು ಏಕೆ ಅಳುತ್ತಿರುವ ಮಗುವಿನ ಬಳಿ ಓಡಿ ಬಂದರು?
4. ಸ್ವಾತಂತ್ರ್ಯ ಎಂದರೇನು?
5. ನಿನ್ನಲ್ಲಿರುವ ಎರಡು ವಿಶೇಷ ಪ್ರತಿಭೆಯನ್ನು ಬರೆ.



**VI. ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ಮೌಲ್ಯ ಶಿಕ್ಷಣದ ಯಾವುದಾದರೂ ಎರಡು ಉದ್ದೇಶಗಳಾವುವು?
2. ಮಾನವ ಜೀವಿಗಳ ಎರಡು ಸ್ವಭಾವವೇನು?
3. ಆರೋಗ್ಯ ಪ್ರಜ್ಞೆ ಎಂದರೇನು?
4. ಅರ್ಥಭರಿತ ಸ್ವಾತಂತ್ರ್ಯ ಎಂದರೇನು?
5. ನೈರ್ಮಲ್ಯದ ಸಕಾರಾತ್ಮಕ ಪರಿಣಾಮಗಳು ಯಾವುವು?
6. ಶುದ್ಧತೆಯಲ್ಲಿ ನಡೆಯುವುದು ಎಂದರೇನು?

**VII. ಯಾವುದಾದರೂ ಆರು ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ: 6x3=18**

1. ಸಂತೋಷದಿಂದಿರಲು ಜಾನ್ ಪೋವೆಲ್ ಸೂಚಿಸುವುದೇನು?
2. ನಿಮ್ಮ ಸುತ್ತಮುತ್ತ ಶುದ್ಧತೆಯನ್ನು ಹೇಗೆ ಕಾಪಾಡಬಹುದು?
3. ಸಾಕು ನಾಯಿ ಹಾಗೂ ಬೀದಿ ನಾಯಿಯ ಜೀವನವನ್ನು ವಿವರಿಸು. ಇದರಿಂದ ನಾವು ಕಲಿಯುವ ಪಾಠ ಏನು?
4. ನೀನು ತುಂಬಾ ಸಂತೋಷಪಟ್ಟ ಒಂದು ಸಂದರ್ಭ ಅಥವಾ ಸಮಾರಂಭದ ಬಗ್ಗೆ ಕೆಲವು ವಾಕ್ಯಗಳಲ್ಲಿ ಬರೆ.
5. ನಿನ್ನ ಜೀವನದಲ್ಲಿ ನೀನು ಕಂಡ ಅತ್ಯುತ್ತಮ ವ್ಯಕ್ತಿ ಯಾರು? ಆ ವ್ಯಕ್ತಿಯಲ್ಲಿ ನೀನು ಕಂಡ ಐದು ಸದ್ಗುಣಗಳನ್ನು ಬರೆ.
6. ಆಳ ಭಾವನೆಗಳುಳ್ಳ ವ್ಯಕ್ತಿ ಮಾತ್ರ ಇತರರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬಲ್ಲ. ವಿವರಿಸು.
7. ನಿನಗೆ ಮೌಲ್ಯ ಶಿಕ್ಷಣ ತರಗತಿಗಳು ಉಪಯುಕ್ತವಾದವೇ? ಹೇಗೆ?
8. ನಮ್ಮ ದೇಶದಲ್ಲಿ ಎಲ್ಲರೂ ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆಯೇ? ಏಕೆ?

**VIII. ಈ ಕೆಳಗಿನ ಎರಡು ವಿಷಯದ ಕುರಿತು ಟಿಪ್ಪಣಿ ಬರೆಯಿರಿ : 2x5=10**

1. ಆರೋಗ್ಯವು ಒಂದು ದೊಡ್ಡ ಸಂಪತ್ತು.
2. ಅವಕಾಶಗಳನ್ನು ಕಳೆದುಕೊಳ್ಳಬಾರದು.
3. ಪ್ರಾಮಾಣಿಕತೆ.
4. ಸಂತೋಷ ಅಂತರಂಗದೊಳಗಿನ ವ್ಯವಹಾರ.